ದೆಹಲಿಯ ಜವಾಹರಲಾಲ್ ನೆಹರು ಯೂನಿವರ್ಸಿಟಿಯ ಗೆಸ್ಟ್‌ಹೌಸ್‌ನಲ್ಲಿ ಡಾಕ್ಟರ್ ನೇಹಾ ಬ್ಯಾನರ್ಜಿಯವರಿಗಾಗಿ ಬೆಳಿಗ್ಗೆ ಹನ್ನೊಂದು ಗಂಟೆಯಿಂದಲೂ ಕಾದು ಕಾದು ಸಾಕಾಗಿತ್ತು ನನಗೆ. ಆಕೆಯೊಂದಿಗಿನ ಇಂದಿನ ಭೇಟಿ ಪೂರ್ವ ನಿರ್ಧಾರಿತವೇ ಆಗಿತ್ತು. ಬೆಳಿಗ್ಗೆ ಮುಂಬಯಿಯಲ್ಲಿ ಫ್ಲೈಟ್ ಹತ್ತುವಾಗ ಕೂಡ ಫೋನು ಮಾಡಿದ್ದೆ. ಫೋನು ರಿಸೀವ್ ಮಾಡಿಕೊಳ್ಳುವುದರ ಬದಲು ಖಂಡಿತವಾಗಿಯೂ ಸಿಗುವುದಾಗಿ ಮೆಸೇಜ್ ಮಾಡಿದ್ದರು. ದೆಹಲಿಯ ರಾಜಾರಾಮ್ ಮೋಹನ್‌ರಾಯ್ ಆಸ್ಪತ್ರೆಯಲ್ಲಿ ಮನಃಶಾಸ್ತ್ರ ತಜ್ಞೆಯಾಗಿಯೂ, ಪ್ರಸೂತಿ ತಜ್ಞೆಯಾಗಿಯೂ ಡಾಕ್ಟರ್ ನೇಹಾ ಅತ್ಯಂತ ಬಿಜಿಯಾದ ವ್ಯಕ್ತಿ. ಅಲ್ಲದೆ ದೆಹಲಿಯ ಪ್ರತಿಷ್ಠಿತ ಪೊಲಿಟಿಕಲ್ ಹಾಗೂ ಬ್ಯುರೋಕ್ರೆಟಿಕ್ ಕುಟುಂಬಗಳ **Family consultant** ಆಗಿಯೂ ಕೆಲಸ ಮಾಡುತ್ತಿರುವುದು ಆಕೆಯ ಸಮಯದ ಪ್ರತಿಯೊಂದು ನಿಮಿಷಕ್ಕೂ ಹೆಚ್ಚಿನ ಬೆಲೆಯನ್ನೂ, ಮಹತ್ವವನ್ನೂ ತಂದುಕೊಟ್ಟಿವೆ.

ಹತ್ತು ವರ್ಷಗಳ ಹಿಂದೆ ಮುಂಬಯಿಯ ಧಾರಾವಿ ಸ್ಲಂನ ಮೈನ್ ರೋಡಿನ ಸಣ್ಣ ಫ್ಲಾಟೊಂದರಲ್ಲಿ ಮೆಡಿಕಲ್ ಸರ್ವೀಸ್ ಪ್ರಾರಂಭಿಸಿ ಇಂದು ಈ ಮಟ್ಟಕ್ಕೇರಿರುವುದು ಆಕೆಯ ಅಪಾರ ಪ್ರತಿಭೆ, ಪರಿಶ್ರಮ ಮತ್ತು ಕಮಿಟ್‌ಮೆಂಟ್‌ಗಳಿಂದಾಗಿಯೇ. ಆಕೆಯ ಸೌಂದರ್ಯ ಮತ್ತು ಸುಮಧುರ ಕಂಠ ಕೂಡ ಪ್ಲಸ್ ಪಾಯಿಂಟುಗಳಾಗಿದ್ದವು. ಹತ್ತು ವರ್ಷಗಳ ಹಿಂದೆ ಆಕೆ ಮುಂಬಯಿಯಲ್ಲಿದ್ದಾಗ ನನಗೆ ಮನಸ್ಸಿಗೆ ಕಿರಿಕಿರಿಯುಂಟಾದಾಗಲೆಲ್ಲ ಆಕೆಯ ಶಾಪಿಗೆ ಹೋಗಿ ಮಾತನಾಡಿಕೊಂಡು, ಆಕೆ ಕೊಟ್ಟ ಔಷಧಿಯನ್ನು ತೆಗೆದುಕೊಂಡು ನಿರಾಳನಾಗುತ್ತಿದ್ದೆ. ಅಷ್ಟೇ ಅಲ್ಲದೆ ಆಕೆ ಮುಂಬಯಿಯ ನಿಸ್ವಾರ್ಥ ಸೋಷಿಯಲ್ ವರ್ಕರ್ ಎಂದೇ ಹೆಸರುವಾಸಿಯಾಗಿರುವ ಶಭಾನ ಅಜ್ಜಿಯೊಂದಿಗೆ ಧಾರಾವಿಯ ಕೊಳಗೇರಿಗಳಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾಗ ನಾನು ಅನೇಕ ಸಾರಿ ಲಕ್ಷಗಟ್ಟಲೆ ಡೊನೇಶನ್ ಕೊಟ್ಟಿದ್ದೆ. ಅಂಥ ಕಾರ್ಯಕ್ರಮವೊಂದರಲ್ಲಿ ಆಕೆ ನನ್ನನ್ನು ಸನ್ಮಾನಿಸಿದ್ದೂ ಉಂಟು. ಹಾಗಾಗಿ ಇಷ್ಟೆಲ್ಲ ವರ್ಷಗಳಲ್ಲಿ ಆಕೆ ಎಷ್ಟೇ ಎತ್ತರಕ್ಕೆ ಬೆಳೆದಿದ್ದರೂ ನನ್ನನ್ನು ಮರೆತಿರಲಿಲ್ಲ.

ಮಧ್ಯಾಹ್ನ ಎರಡು ಗಂಟೆಯಾದರೂ ನೇಹಾ ಬ್ಯಾನರ್ಜಿಯವರ ಸುಳಿವಿರಲಿಲ್ಲ. ಫೋನ್ ಕೂಡ ರಿಸೀವ್ ಮಾಡಿಕೊಳ್ಳುತ್ತಿರಲಿಲ್ಲ. ನಾನು ಸಂಜೆ ಏಳು ಗಂಟೆಯ ಫ್ಲೈಟ್‌ಗೆ ಮುಂಬಯಿಗೆ ಹಿಂತಿರುಗಬೇಕಾಗಿತ್ತು. ಕಾದು ಪ್ರಯೋಜನವಿಲ್ಲವೆಂದುಕೊಂಡು ಟ್ಯಾಕ್ಸಿ ಮಾಡಿಕೊಂಡು ಇಪ್ಪತ್ತು ನಿಮಿಷಗಳಲ್ಲಿ ರಾಜಾರಾಮ್ ಮೋಹನ್‌ರಾಯ ಆಸ್ಪತ್ರೆಯನ್ನು ತಲುಪಿದ್ದೆ. ಆಸ್ಪತ್ರೆ ಜಾತ್ರೆಯಂತೆ ರೋಗಿಗಳಿಂದ ಗಿಜಿಗುಡುತ್ತಿತ್ತು. ನರಳುವ ರೋಗಿಗಳಿಂದ ಆಸ್ಪತ್ರೆ ನರಕದಂತೆ ಭಾಸವಾಗುತ್ತಿತ್ತು. ಎರಡನೆಯ ಮಹಡಿಯಲ್ಲಿದ್ದ ಆಕೆಯ ಚೇಂಬರ್ ಹತ್ತಿರ ತಲುಪಿದಾಗ ಅಭಿಮನ್ಯುವಿನ ಚಕ್ರವ್ಯೂಹ ಕಥೆ ನೆನಪಾಗಿತ್ತು. ಡಾಕ್ಟರ್ ನೇಹಾ ಬ್ಯಾನರ್ಜಿಯವರು ಚೇಂಬರ್‌ನಲ್ಲಿರಲಿಲ್ಲ. ಚೇಂಬರ್‌ನಲ್ಲಿ ತುಂಬಿಕೊಂಡಿದ್ದ ರೋಗಿಗಳನ್ನು ಪರೀಕ್ಷಿಸುತ್ತಲೇ ಅಸಿಸ್ಟೆಂಟ್ ಡಾಕ್ಟರ್ ನನ್ನನ್ನು ವಿಚಾರಿಸಿಕೊಂಡಿದ್ದರು. ಯಾವುದೋ ಎಮರ್ಜೆನ್ಸಿ ಕೇಸ್ ಅಟೆಂಡ್ ಮಾಡಲು ಡಾಕ್ಟರ್ ನೇಹಾ ರಾತ್ರಿಯೇ ಮಸ್ಸೂರಿಗೆ ಹೋಗಿದ್ದಾಗಿಯೂ, ಇಂದು ಬರಬೇಕಾಗಿದ್ದವರು ಅನಿವಾರ್ಯ ಕಾರಣಗಳಿಂದಾಗಿ ಬರಲು ಸಾಧ್ಯವಾಗಿಲ್ಲವೆಂದು ಹೇಳುತ್ತಿರುವಾಗಲೇ ನನ್ನ ಮೊಬೈಲ್ ರಿಂಗಾಗುವಿದರೊಂದಿಗೆ ಡಾ. ನೇಹಾ ಬ್ಯಾನರ್ಜಿ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. ಚೇಂಬರ್‌ನಿಂದ ಹೊರ ಬಂದು 'ಹಲೋ ಗುಡ್ ಆಫ್ಟರ್‌ನೂನ್ ಡಾಕ್ಟರ್...' ಎಂದಿದ್ದೆ.

'ಇಫ್ ಐಯಾಮ್ ನಾಟ್ ರಾಂಗ್, ನೀವು ನಮ್ಮ ಆಸ್ಪತ್ರೆಯಲ್ಲಿದ್ದೀರಿ. ಐ ಕೆನ್ ಮೇಕ್ ಔಟ್ ಫ್ರಮ್ ದಿನ ನಾಯ್ಸ್ ಆಫ್ ದಟ್ ಪ್ಲೇಸ್...' ಆಕೆಯ ಗ್ರಹಿಕೆಯಿಂದ ಅಚ್ಚರಿಯಾಗಿತ್ತು ನನಗೆ.

'ಸರಿಯಾಗಿ ಹನ್ನೊಂದು ಗಂಟೆಯಿಂದ್ಲೂ ನಿಮ್ಮ ಫೋನ್‌ಗೆ ಕಾಯ್ತಿದ್ದೀನಿ...' ಬೇಡವೆನಿಸಿದರೂ ನನ್ನ ಧ್ವನಿಯಲ್ಲಿ ಬೇಸರದ ಛಾಯೆ ನುಸುಳಿಕೊಂಡಿತ್ತು.

'ಓಹ್, ಸಾರಿ. ಇಟ್ ಹ್ಯಾಪೆನ್ಡ್ ಲೈಕ್ ದಟ್. ಅನಿವಾರ್ಯ ಕಾರಣದಿಂದಾಗಿ ನಾನು ಮಸ್ಸೂರಿಗೆ ಬರಬೇಕಾಯ್ತು. ಒಂದು ಕೆಲ್ಸ ಮಾಡ್ತೀರ, ಇಫ್ ಯು ಡೋಂಟ್ ಮೈಂಡ್ ವೆಹಿಕಲ್ ಇಡ್ಕೊಂಡು ಮಸ್ಸೂರಿಗೆ ಬಂದ್‌ಬಿಡಿ. ಇನ್ನರ್ಧ ಗಂಟೆಗೆ ದೆಹಲಿ ಬಿಟ್ರು ರಾತ್ರಿ ಒಂಬತ್ತು ಗಂಟೆಗೆ ಬಂದು ಸೇರ್ತೀರಿ. ಕಾರ್ಟನ್ ಹೊಟೇಲ್‌ನಲ್ಲಿ ಬೇಕಾದ್ರೆ ರೂಮ್ ರಿಸರ್ವ್ ಮಾಡಿಸ್ತೀನಿ. ಒಂದು ಗಂಟೆ ಫ್ರೀಯಾಗಿ ಮಾತನಾಡಬಹುದು. ನಾಳಿದ್ದು ಕಾನ್‌ಫರೆನ್ಸ್‌ಗೆಂದು ಮಾಸ್ಕೊಗೆ ಹೋಗ್ತಾ ಇದ್ದೀನಿ. ಅನದರ್ ಟೆನ್ ಡೇಸ್ ಐ ಮೆ ನಾಟ್ ಬಿ ಅವೆಯ್ಲಬಲ್. ನಿಮ್ಮ ಅನುಕೂಲ...' ಅನವಶ್ಯಕವಾಗಿ ಆಕೆ ಸಬೂಬು ಹೇಳುವುದಿಲ್ಲವೆಂಬುದು ನನಗೆ ತಿಳಿದಿತ್ತು.

'ಬರ್ತೀನಿ...' ಎಂದಷ್ಟೆ ಹೇಳಿದೆ.

ನಾನು ಮಸ್ಸೂರಿಯ ಕಾರ್ಲ್‌ಟನ್ ಹೌಸ್ ಹೊಟೇಲ್ ತಲುಪಿದಾಗ ರಾತ್ರಿ ಒಂಬತ್ತೂವರೆ ಗಂಟೆಯಾಗಿತ್ತು. ವಿಶಾಲವಾದ ಸೂಪರ್ ಡೀಲಕ್ಸ್ ಕಾಟೇಜ್‌ನ ಒಂದು ಮಂಚದ ಮೇಲೆ ಡಾಕ್ಟರ್ ನೇಹಾ ಬ್ಯಾನರ್ಜಿಯವರು ಮೆಡಿಸಿನ್‌ಗೆ ಸಂಬಂಧಿಸಿದ ಪುಸ್ತಕವನ್ನೊಂದು ಹಿಡಿದು ಕುಳಿತಿದ್ದರು. ಮತ್ತೊಂದು ಮಂಚದ ಮೇಲೆ ಸುಮಾರು ಹದಿನೆಂಟು ಇಪ್ಪತ್ತು ವರ್ಷ ವಯಸ್ಸಿನ ಯುವತಿಯೊಬ್ಬಳು ಪ್ರಶಾಂತವಾಗಿ ನಿದ್ರಿಸುತ್ತಿದ್ದಳು. ಕಾಟೇಜ್‌ನ ಎರಡು ಅಗ್ಗಿಷ್ಟಿಕೆಗಳು ಬೆಚ್ಚಗಿನ ಹಿತವಾದ ವಾತಾವರಣವನ್ನು ನಿರ್ಮಿಸಿದ್ದವು. ನಗುತ್ತಾ ಸೋಫಾದ ಮೇಲೆ ಕುಳಿತಿದ್ದೆ ನಾನು.

'ಸಾರಿ, ನಿನ್ನೆ ದಿನಪೂರ್ತಿ ಬಿಜಿಯಾಗಿ ಬಿಟ್ಟೆ. ನಿನ್ನೆ ದೆಹಲಿಯಲ್ಲಿ ಆ ಬಾಬಾ ವಿರುದ್ಧದ ಪ್ರತಿಭಟನಾ ರ‍್ಯಾಲಿಯಲ್ಲಿ ಪಾಲ್ಗೊಳ್ಳಬೇಕಾಯಿತು. ಪಂಚಕುಲದಲ್ಲಿ ಸುಮಾರು ಜನ ಗಲಭೆಗೆ ಬಲಿಯಾದರು. ಇಂಥ ಆಧುನಿಕ ಕಾಲದಲ್ಲೂ ಹೇಗೆ ಬಾಬಾರಂಥ ಸಾಧುಗಳ ಕಡೆ ಸೆಳೆಯಲ್ಪಡುತ್ತಾರೆ ಎಂಬ ವಿಷಯವನ್ನು ತಿಳಿದುಕೊಳ್ಳುವುದೇ ಒಂದು ಚಾಲೆಂಜಿಂಗ್ ಸಂಗತಿಯಾಗಿದೆ. ಅದಿರಲಿ, ನೀವು ಇಲ್ಲಿಯವರೆಗೂ ನನ್ನನ್ನು ಕಾಣಲು ಬಂದಿರುವಿರೆಂದರೆ ಮುಖ್ಯವಾದ ವಿಷಯವೇ ಇರಬೇಕು. ಇಲ್ಲೆ ಊಟ ಮಾಡಿಕೊಂಡು ನಿಮ್ಮ ರೂಮಿಗೆ ಹೋಗಬಹುದು...' ಆಕೆ ನೇರವಾಗಿ ವಿಷಯಕ್ಕೆ ಬಂದುಬಿಟ್ಟಿದ್ದರು.

'ಕನಸುಗಳು...' ನಾನೂ ನೇರವಾಗಿ ವಿಷಯಕ್ಕೆ ಬಂದಿದ್ದೆ.

'ಅಂದರೆ...' ಆಕೆ ಪುಸ್ತಕವನ್ನು ಮಡಚಿಟ್ಟು ನನ್ನ ಎದುರುಗಿನ ಸೋಫಾದಲ್ಲಿ ಕುಳಿತು ಕೇಳಿದ್ದರು.

'ಈ ಆರು ತಿಂಗಳಿನಿಂದಲೂ ನನಗೆ ವಿಪರೀತವಾಗಿ ಕನಸುಗಳು ಬೀಳುತ್ತಿವೆ. ಹಗಲಿನಲ್ಲಿ ಕಣ್ಮುಚ್ಚಿದರೂ ಕನಸುಗಳು ಬಿದ್ದು ಥಟ್ಟನೆ ಎಚ್ಚರವಾಗುತ್ತದೆ. ಆಕಾಶದಲ್ಲಿ ಹಾರಿದಂತೆ, ನನ್ನ ಹೆಣವನ್ನು ನಾನೇ ಕಿತ್ತು ತಿನ್ನುತ್ತಿರುವಂತೆ, ಸಣ್ಣ ಜಂತುವಾಗಿ ಪಾಯಿಖಾನೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವಂತೆ, ಬೆತ್ತಲೆಯಾಗಿ ಮುಂಬಯಿಯ ನಡುಬೀದಿಯಲ್ಲಿ ಓಡಾಡಿದಂತೆ, ಬಸುರಾಗಿ ಚಿತ್ರವಿಚಿತ್ರ ಪ್ರಾಣಿಪಕ್ಷಿಗಳಿಗೆ ಜನ್ಮ ನೀಡಿದಂತೆ, ಕಾಗೆಯಾಗಿ ಕಡಲ ತೀರಿದಲ್ಲಿ ಕುಳಿತು ಒಂದು ಅಗುಳು ಅನ್ನಕ್ಕಾಗಿ ಕಾಯುತ್ತಿರುವಂತೆ, ಹಿಂಜಿದ ಹತ್ತಿಯಾದಂತೆ, ನೀರಿನ ಝುರಿಯಾಗಿ ಭೂಮಿಯೊಳಗಿನ ಕತ್ತಲೆಯ ಪದರುಗಳನ್ನು ಸೀಳಿಕೊಂಡು ಹೋದಂತೆ... ಓಹ್! ಇನ್ನೂ ಅದೆಷ್ಟೊ ಕನಸುಗಳು. ಲೀಲಾವತಿ ಆಸ್ಪತ್ರೆಯ ಡಾಕ್ಟರ್ ಶಿವಾಜಿ ಗಾಂವಕರ್ ಹತ್ತಿರ ಕೂಡ ಟ್ರೀಟ್‌ಮೆಂಟ್ ತೆಗೆದುಕೊಂಡೆ. ಏಕೋ ಭಯವಾಗಲಾರಂಭಿಸಿದೆ ನನಗೆ...' ಟೀಪಾಯ್ ಮೇಲಿಟ್ಟಿದ್ದ ಫ್ಲಾಸ್ಕ್‌ನಿಂದ ಅರ್ಧ ಗ್ಲಾಸು ಬಿಸಿನೀರನ್ನು ಬಗ್ಗಿಸಿಕೊಂಡು ಕುಡಿದಿದ್ದೆ.

'ದೇಹ ಮತ್ತು ಮನಸ್ಸುಗಳ ರಚನೆಯಲ್ಲಿ ಎಂಥವೋ ಇರರೆಗ್ಯುಲಾರಿಟೀಸ್ ಇರುವುದು ಇತ್ತೀಚಿನ ಮೆಡಿಕಲ್ ಸ್ಟಡೀಸ್‌ನಿಂದ ಪ್ರೂವ್ ಆಗಿದೆ. ಮುಂಬಯಿನ ಶ್ರೀಮಂತ ಇಂಡಸ್ಟ್ರಿಯಲಿಸ್ಟ್‌ಗಳಲ್ಲಿ ಒಬ್ಬರಾದ ನಿಮ್ಮಲ್ಲಿ ಭಯ ಹುಟ್ಟುವುದೆಂದರೇನು. ನಿಮ್ಮ ಬದುಕಿನ ಯಾವುದೋ ಘನತರವಾದ ಘಟನೆಯನ್ನು ನನ್ನ ಬಳಿ ನೀವಿನ್ನೂ ಹೇಳಿಕೊಂಡಿಲ್ಲವೆಂದೇ ನನ್ನ ಗುಮಾನಿ...' ಆಕೆಯ ಮಾತುಗಳಿಂದ ಅಚ್ಚರಿಯಾಗಿತ್ತು ನನಗೆ.

'ಹೌದು, ಈಗ ಹೇಳಬಹುದಾ...?' ಸ್ವಲ್ಪ ಮುಜುಗರದಿಂದಲೇ ಕೇಳಿದ್ದೆ.

'ಡಾಕ್ಟರ್‌ಗಳ ಬಳಿ ಏನನ್ನೂ ಮುಚ್ಚಿಟ್ಟುಕೊಳ್ಳಬಾರದು...' ಆಕೆಯೂ ಎರಡು ಗುಟುಕು ನೀರು ಕುಡಿದಿದ್ದರು.

ನಾನು ಹೇಳತೊಡಗಿದೆ: 'ಧಾರಾವಿ ಸ್ಲಂನ ತೀರಾ ಬಾಲ್ಯದ ದಿನಗಳು ನನಗೆ ನೆನಪೇ ಇಲ್ಲ. ನನಗೆ ಬುದ್ಧಿ ತಿಳಿದಾಗಿನಿಂದಲೂ ಶೇಟು ಭವರ್‌ಲಾಲ್‌ರವರ ಪ್ಲಾಸ್ಟಿಕ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ. ಕಾಫಿ, ತಿಂಡಿ, ಊಟ ಎಲ್ಲವೂ ಫ್ಯಾಕ್ಟರಿಯಲ್ಲೆ ಆಗುತ್ತಿದ್ದವಲ್ಲದೆ, ನಾನು ಅಲ್ಲಿಯೇ ಮಲಗುತ್ತಿದ್ದೆ. ಭವರ್‌ಲಾಲ್ ತುಂಬಾ ಬುದ್ಧಿವಂತ ವ್ಯಾಪಾರಿಯೆಂದು ಸ್ಲಂನಲ್ಲಿ ಹೆಸರು ಗಳಿಸಿದ್ದ. ಕೆಲಸದವರನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದ. ಸುಮಾರು ಹನ್ನೆರಡು ವರ್ಷ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿದ ನಂತರ ಶೇಟು ಭವರ್‌ಲಾಲ್ ನನ್ನನ್ನು ತನ್ನ ಮನೆ ಕೆಲಸಕ್ಕೆ ಶಿಫ್ಟ್ ಮಾಡಿದ್ದ. ಇಷ್ಟರಲ್ಲಿ